ವಾಸಿಸ ತೊಡಗುತ್ತಾನೆ. ರಾಜಕುಮಾರಿಯಾಗಿ ಅರಮನೆಯಲ್ಲಿರಬೇಕಾದ ಮಗು ಕುಂದಲತ ಎಂಬ ಹೆಸರಿನಿಂದ ಬುಡಕಟ್ಟು ಜನರ ಮಕ್ಕಳಂತೆ ಬೆಳೆಯುತ್ತಾಳೆ. ಯೋಗೀಶ್ವರ ಆ ಮಗುವಿಗೆ ಪ್ರಕೃತಿಯ ವಿವರಗಳೊಂದಿಗೆ ಸಹಜ ಶಿಕ್ಷಣವನ್ನು ಕೊಟ್ಟು, ಯಾವುದೇ ತಾತ್ವಿಕ ವಿಚಾರಗಳನ್ನು ಚರ್ಚಿಸಲು ಸಾಧ್ಯವಾಗುವಂತಹ ಬುದ್ಧಿವಂತಳನ್ನಾಗಿ ಮಾಡುತ್ತಾನೆ.

ಕಳಿಂಗ ರಾಜನಿಗೆ 'ಕುಂದಲತ' ಜೊತೆಗೆ ಪ್ರತಾಪಚಂದ್ರನೆಂಬ ಮಗನಿರುತ್ತಾನೆ. ಕಪಿಲನಾಥನ ತಮ್ಮನಾದ ಅಮೋಘನಾಥ ಮಂತ್ರಿಯಾಗಿರುತ್ತಾನೆ. ಇವನಿಗೆ ತಾರಾನಾಥ ಮತ್ತು ಸ್ವರ್ಣಮಯಿದೇವಿ ಎಂಬ ಮಕ್ಕಳು. ಇವರಿಗೂ ರಾಜಕುಮಾರ ಪ್ರತಾಪಚಂದ್ರನಿಗೂ ಸ್ನೇಹ. ಒಮ್ಮೆ ರಾಜಕುಮಾರ ಪ್ರತಾಪಚಂದ್ರನಿಗೂ ಮಂತ್ರಿ ಮಗ ತಾರಾನಾಥನಿಗೂ ಸಣ್ಣ ವಿಷಯಕ್ಕೆ ಜಗಳ ಬಂದು ತಾರಾನಾಥ ಕಣ್ಮರೆಯಾಗುತ್ತಾನೆ. ಯೋಗೀಶ್ವರನ ಆಶ್ರಯದಲ್ಲಿ ರಾಮಕಿಶೋರನೆಂಬ ಹೆಸರಿನಲ್ಲಿ ವಾಸಿಸತೊಡಗುತ್ತಾನೆ. ಅಲ್ಲಿ ಕುಂದಲತಳಿಗೂ ಇವನಿಗೂ ಪ್ರೇಮ ಮೊಳೆತು ಹೆಮ್ಮರವಾಗುತ್ತದೆ. ಮಂತ್ರಿ ಮಗಳಾದ ಸ್ವರ್ಣಮಯಿದೇವಿಗೂ, ರಾಜಕುಮಾರ ಪ್ರತಾಪಚಂದ್ರನಿಗೂ ಪ್ರೀತಿ ಚಿಗುರಿ ಮದುವೆಯಾಗುತ್ತದೆ.

ಕುಂತಳದೇಶದ ರಾಜನಾದ ಕೃತವೀರ್ಯನು ಕಳಿಂಗರಾಜನಿಗೆ ಕಪ್ಪವನ್ನು ಪ್ರತಿವರ್ಷ ಕೊಡಬೇಕಾಗಿತ್ತು. ಸ್ವತಂತ್ರ ರಾಜನಾಗಬೇಕೆಂಬ ಹಂಬಲದಿಂದ ಕಪ್ಪ ಕೊಡದೆ ಯುದ್ಧವನ್ನು ಬಯಸುತ್ತಾನೆ. ಆಗತಾನೇ ಮದುವೆಯಾಗಿ ರಾಜನಾಗಿದ್ದ ಪ್ರತಾಪಚಂದ್ರ ಕಪ್ಪ ಕೊಡದಿದ್ದರೆ ಯುದ್ಧ ಅನಿವಾರ್ಯವೆಂದು ತಿಳಿಸಲು ದೂತನನ್ನು ಕುಂತಳಕ್ಕೆ ಕಳುಹಿಸುತ್ತಾನೆ. ಅದಕ್ಕೊಪ್ಪದ ಕೃತವೀರ್ಯ ಯುದ್ಧಕ್ಕೆ ಬರುತ್ತಾನೆ. ಅಮೋಘನಾಥನ ಚಾಣಾಕ್ಷತೆ ದೂರದೃಷ್ಟಿಯಿಂದ ಯೋಗೀಶ್ವರ ವೇಷದಲ್ಲಿದ್ದ ಕಪಿಲನಾಥ, ತಾರಾನಾಥ ಮತ್ತು ಬೇಡರ ಕರಚ ಮುಂತಾದವರೊಡನೆ ಒಟ್ಟಾಗಿ ಯುದ್ಧ ನಡೆಯುತ್ತದೆ. ಸೆಣಸಲಾಗದೆ ಕುಂತಳದ ರಾಜ ಕೃತವೀರ್ಯನು ಸೆರೆಯಾಗುತ್ತಾನೆ. ನಂತರ ಅವನನ್ನು ಬಿಡುಗಡೆ ಮಾಡಿ, ಸಾಮಂತನಾಗಿರುವಂತೆ ಸೂಚಿಸಿ, ಗೌರವಯುತವಾಗಿ ಕಳುಹಿಸಿಕೊಡುತ್ತಾರೆ. ಎರಡೂ ರಾಜ್ಯಗಳು ಸೌಹಾರ್ದಯುತವಾಗಿರುತ್ತವೆ. ಕುಂದಲತಳೇ ರಾಜಕುಮಾರಿ, ಯೋಗೀಶ್ವರನೇ ಕಪಿಲನಾಥ, ರಾಮಕಿಶೋರನೇ ತಾರಾನಾಥ ಎಂಬುದು ತಿಳಿಯುತ್ತದೆ. ತಾರಾನಾಥನೊಂದಿಗೆ ಕುಂದಲತಳ ಮದುವೆಯಾಗುತ್ತದೆ. ಅವನು ಸೇನಾಪತಿಯಾಗುತ್ತಾನೆ. ಮಂತ್ರಿ ಕುಟುಂಬ ಮತ್ತು ರಾಜನ ಕುಟುಂಬ ಅವಿಭಕ್ತ ಕುಟುಂಬವಾಗುತ್ತದೆ.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯಗಳು 1757ರ ಪ್ಲಾಸಿ ಕದನದಲ್ಲಿ ಬಂಗಾಳದ ನವಾಬ ಸಿರಾಜುದ್ದೌಲನನ್ನು ಸೋಲಿಸಿದಾಗ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಯಿತೆಂದು ಹೇಳಬಹುದು. ಆದರೆ, ಬ್ರಿಟಿಷ್ ಪ್ರಭುತ್ವಕ್ಕೆದುರಾಗಿ ಶಕ್ತಿಯುತವಾದ ರಾಷ್ಟ್ರೀಯ ಹೋರಾಟ ಬೆಳೆದಿದ್ದು ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಮೊದಲ ಭಾಗದಲ್ಲಿ. ಭಾರತದ ಜನರ ಹಾಗೂ ಬ್ರಿಟಿಷ್ ಆಡಳಿತಗಾರರ ಹಿತಾಸಕ್ತಿಗಳ ನಡುವೆ ಉಂಟಾದ ಘರ್ಷಣೆಗಳ ಫಲ ಈ ರಾಷ್ಟ್ರೀಯತೆ. ಈ ಘರ್ಷಣೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಭಾರತದಲ್ಲಿ ಬ್ರಿಟಿಷ್ ಆಡಳಿತದ ಮೂಲ ಲಕ್ಷಣ ಮತ್ತು ಭಾರತೀಯ ಸಮಾಜದ ಮೇಲೆ ಆದ ಅದರ ಪರಿಣಾಮಗಳನ್ನು ಅಧ್ಯಯನ ಮಾಡಬೇಕು. ಆದ್ದರಿಂದ ಬ್ರಿಟಿಷ್ ಆಡಳಿತದ ಸ್ವರೂಪವೇ ನಮ್ಮಲ್ಲಿ ರಾಷ್ಟ್ರೀಯತೆಯ ಭಾವನೆಗಳು ಮೂಡುವುದಕ್ಕೆ ಕಾರಣವಾಯಿತು. ಈ ಕಾದಂಬರಿಯಲ್ಲಿ ದೇಶೀಯ ರಾಜರು ಮತ್ತು ಜನರಲ್ಲಿ ರಾಷ್ಟ್ರೀಯತೆಯ ಭಾವನೆ ಮೂಡಿರುವ ಸ್ವರೂಪವನ್ನು ಅರಿಯಬಹುದು. ಕಾದಂಬರಿಯ ಮುನ್ನುಡಿಯಲ್ಲಿ ಅಪ್ಪನೆಡುಬಾಡಿಯವರು ಹೇಳಿರುವ ಮಾತುಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. 'ಈ ಕತೆಯಲ್ಲಿ ಕಳಿಂಗ ಕುಂತಳ ಮೊದಲಾದ ದೇಶಗಳ ಹೆಸರುಗಳು ಹಾಗೂ